ಆತಂಕದ ಮುಖ ಹೊತ್ತ ಶ್ರೀಮಂತ ಹೆಣ್ಣು ಹೊರಗೆ ಇಣುಕು ಹಾಕಿ ಬೆದರಿಕೆಯ ನೋಟ ಹರಿಸಿತು.

ಇನ್ಸ್‌ಪೆಕ್ಟರ್ ರಾಜಧಾನಿ ಮುಗುಳ್ನಕ್ಕ.

'ಮೇಡಂ, ನಾನು ರಾಜಧಾನಿ... ಒಂದೆರಡು ಬಾರಿ ನಿಮ್ಮ ಬಂಗಲೆಗೆ ಬಂದಾಗ ನಿಮ್ಮನ್ನು ಭೇಟಿಯಾಗಿದ್ದೆ' ಪರಿಚಯ ಮಾಡಿಕೊಂಡ.

ಯೂನಿಫಾರಂನಲ್ಲಿದ್ದವನನ್ನು ಗುರುತಿಸಲು ಮೇನಕಾಗೆ ಹೆಚ್ಚು ಸಮಯ ಬೇಕಾಗಿರಲಿಲ್ಲ. ಪದೇ ಪದೇ ಅವನು ಮನೆಗೆ ಬಂದಾಗ ಅವನಿಂದ ಕಣ್ತಪ್ಪಿಸಿ ಮಹಡಿ ಸೇರುತ್ತಿದ್ದುದ್ದು ನೆನಪಿಗೆ ಬಂತು. ಲಹರಿಯ ಬಗ್ಗೆ ಅನಗತ್ಯ ಪ್ರಶ್ನೆ ಹಾಕಿ ಬೋರ್ ಹಿಡಿಸಿದ್ದ.

'ನಮಸ್ಕಾರ ಸಾಹೇಬ್ರಿಗೆ' ಧೈರ್ಯದಿಂದ ಪ್ರತಿ ನುಡಿದಳು.

'ತಾವೇನು ಇಲ್ಲಿ? ಡ್ಯಾಡಿ ಇನ್ನ ಬರೋದು ಮೂರು ದಿನ ಆಗುತ್ತೆ'

'ಡ್ಯಾಡಿನ ನೋಡೋಕೆ ಬಂದಿಲ್ಲ ನಾನು. ಫಾರ್ಮ್ ಹೌಸ್‌ನ ನೋಡ್ಕೊಂಡು ಹೋಗೋದಿಕ್ಕೆ ಬಂದೆ' ಮಾತಾಡುತ್ತಲೇ ಒಳಗಡಿಯಿಟ್ಟ. ಒಳಗಿದ್ದ ಆಳು ಭಯದ ನೋಟ ಹರಿಸಿ ಇನ್ಸ್‌ಪೆಕ್ಟರ್‌ನನ್ನು ನೋಡಿದ. ಅವನನ್ನು ದಾಟಿಕೊಂಡು ಒಳಗೆ ಬಂದ ಅಧಿಕಾರಿ ಪರಿಶೀಲನೆಯ ದೃಷ್ಟಿ ಹಾಯಿಸಿದ.

ಉದ್ದನೆಯ ಹಾಲ್‌ನ ಎದುರಿಗೆ ಎರಡು ಸುಸಜ್ಜಿತವಾದ ಕೋಣೆಗಳು. ಎರಡೂ ಪೀಠೋಪಕರಣಗಳಿಂದ ಅಲಂಕೃತವಾಗಿದ್ದವು. ಹೊರ ನೋಟಕ್ಕೆ ಹಳೇಯ ಮನೆಯಂತೆ ಕಂಡರೂ ಫಾರ್ಮ್ ಹೌಸ್ ಸಂಪೂರ್ಣ ಸೌಕರ್ಯದಿಂದ ಕೂಡಿದ ಮನೆ.

'ಈ ಮನೆಯಲ್ಲಿ ಯಾರಿರ್ತಾರೆ? ಇಷ್ಟೊಂದು ಸ್ವಚ್ಛವಾಗಿದೆಯಲ್ಲ?'

'ಹೌದು, ಲಹರಿ ಈ ಮನೇನ ಉಪಯೋಗಿಸ್ತಾ ಇದ್ಲು' ಬಾಯಿ ತಪ್ಪಿ ಬಂದ ಮಾತಿಗೆ ಮೇನಕಾ ತುಟಿ ಕಚ್ಚಿ ಹಿಡಿದಳು.

***

ಮೇನಕಾಳ ಮಾತಿಗೆ ಇನ್ಸ್‌ಪೆಕ್ಟರ್ ರಾಜಧಾನಿಯ ಮುಖದಲ್ಲಿ ಆಶ್ಚರ್ಯದ ಗೆರೆಗಳು ಮೂಡಿದವು. ಶ್ರೀಮಂತಿಕೆಯ ಹುಡುಗಿ ಫಾರ್ಮ್ ಹೌಸ್‌ನಲ್ಲಿ ವಾಸ! ಅಂತಹ ಕೆಳಸ್ತರದ ಬದುಕನ್ನು ಆರಿಸಿಕೊಂಡಿದ್ದಕ್ಕೆ ಅಪಾಯ ಎದುರಾಗಿದೆ!

ಫಾರ್ಮ್ ಹೌಸ್ ಭುಜಂಗೇಶರಾಯರ ಬಂಗಲೆಯಿಂದ ಮೈಲುಗಳಷ್ಟು ದೂರ! ಇಲ್ಲಿ ಶ್ರೀಮಂತ ಮನೆತನದ ಹುಡುಗಿ ಒಬ್ಬಂಟಿಯಾಗಿ ಇರುತ್ತಿದ್ದದ್ದು!

ಇನ್ಸ್‌ಪೆಕ್ಟರ್ ತಲೆ ಕೆರೆದುಕೊಂಡು ಮೇನಕಾಳನ್ನು ದಿಟ್ಟಿಸುತ್ತಾ ಪ್ರಶ್ನೆ ಎಸೆದ.

'ಆಕೆ ಒಂಟಿಯಾಗಿ ಇಲ್ಲಿ ಇರುತ್ತಿದ್ದಳೆ?'

ಮೇನಕಾ ಅನಗತ್ಯ ಲಹರಿಯ ಹೆಸರೆತ್ತಿ ಅಡಕತ್ತರಿಯಲ್ಲಿ ಸಿಲುಕಿದಳು. ಪ್ರಶ್ನೆಯ ಮೇಲೆ ಪ್ರಶ್ನೆ ಎಸೆದು ತಲೆ ಚಿಟ್ಟು ಹಿಡಿಸುತ್ತಾನೆ. ತನ್ನ ಗ್ರಹಚಾರ ಚೆನ್ನಾಗಿಲ್ಲ. ನಿಟ್ಟುಸಿರಿಟ್ಟು ಇನ್ಸ್‌ಪೆಕ್ಟರ್‌ನತ್ತ ನೋಡಿದಳು.

'ಇಲ್ಲ, ಅವಳು ಫಾರ್ಮ್ ಹೌಸ್‌ಗೆ ಬರೋವಾಗ ಒಂದೋ ಚಿಕ್ಕಮ್ಮ ಇಲ್ಲಾಂದ್ರೆ ನಾನು ಬರ್ತಿದ್ದೆ. ಒಂಟಿಯಾಗಿ ಎಂದೂ ಅವಳು ಬಂದದ್ದಿಲ್ಲ' ಬೀಸುವ ದೊಣ್ಣೆಯಿಂದ ತಪ್ಪಿಸಿಕೊಂಡಂತೆ ಮಾತು ಸರಿ ತೂಗಿಸಿ ನುಡಿದಳು. ಇನ್ಸ್‌ಪೆಕ್ಟರ್‌ಗೆ ಸಮಾಧಾನವೆನಿಸಿದರೂ ಶ್ರೀಮಂತಿಕೆಯಲ್ಲಿ ತೇಲುವ ಹೆಣ್ಣು ಫಾರ್ಮ್ ಹೌಸ್‌ಗೆ ಬಂದು ನಿಲ್ಲುವುದೆಂದರೆ? ಅನುಮಾನವಿನ್ನೂ ಬಗೆಹರಿಯಲಿಲ್ಲ.

'ಮನೆಯಲ್ಲೇನಾದರೂ ಅಹಿತಕರ ಘಟನೆ ನಡೆಯುತ್ತಿತ್ತೆ ನೀವು ಇಲ್ಲಿಗೆ ಬರೋದಿಕ್ಕೆ?' ಮೇನಕಾ ತಲೆಗೆ ಕೈ ಹಚ್ಚಿಕೊಂಡಳು.

**ಹಕ್ಕು**

ದೇವರಿಗಿಟ್ಟ ಹಾಲನ್ನು ಕಣ್ಮುಚ್ಚಿ
ಕುಡಿದದ್ದು ಬೆಕ್ಕು!
ಅದು ದೇವರು ಕೊಟ್ಟ
ಹಕ್ಕು!

★ ದೇವಕಿಸುತ




'ಇಲ್ಲ, ನಮ್ಮನೇಲಿ ಆ ತರದ ಯಾವುದೇ ಘಟನೆಗಳು ನಡೆಯೋದಿಲ್ಲ. ಅದಕ್ಕೂ ನಾವು ಇಲ್ಲಿಗೆ ಬರೋದಿಕ್ಕೂ ಏನು ಸಂಬಂಧವಿದೆ, ಸಾರ್?' ಇನ್ಸ್‌ಪೆಕ್ಟರ್ ರಾಜಧಾನಿಯನ್ನು ಪ್ರಶ್ನಿಸಿ ತಬ್ಬಿಬ್ಬುಗೊಳಿಸಿದಳು.

'ಅದು... ಅದು... ಈ ಫಾರ್ಮ್ ಹೌಸ್ ಇಂತಹ ನಿರ್ಜನ ಪ್ರದೇಶದಲ್ಲಿದೆ. ಇಲ್ಲಿಗೆ ಬಂದು ನಿಲ್ಲೋದಿಕ್ಕೂ ಎಂಟೆದೆ ಬೇಕು. ಅದಕ್ಕೆ ಕೇಳ್ದೆ'

'ಇದು ನಮ್ಮ ಖಾಸಗಿ ಫಾರ್ಮ್ ಹೌಸ್. ಇಲ್ಲಿಗೆ ಹೊರಗಿನವರು ಯಾರೂ ಬರೋದಿಲ್ಲ. ಅದಲ್ಲದೆ ನಮ್ಮ ಆಳುಗಳು ರಾತ್ರಿ ಹಗಲು ಇಲ್ಲಿ ಕೆಲಸ ಮಾಡ್ತಾ ಇರ್ತಾರೆ. ಇನ್ನೇನು ಕಟಾವು ಆರಂಭವಾದ ಮೇಲೆ ಇಲ್ಲಿ ಕೈ ತುಂಬಾ ಕೆಲಸ ಇರುತ್ತೆ. ಡ್ಯಾಡಿನೂ ಹೆಚ್ಚಾಗಿ ಇಲ್ಲಿಯೇ ಉಳ್ಕೊಳ್ತಾರೆ' ಅಧಿಕಾರಿಗೆ ಸಮಾಧಾನವಾಗುವ ಉತ್ತರವಿತ್ತಳು.

ಇನ್ಸ್‌ಪೆಕ್ಟರ್ ರಾಜಧಾನಿ ಹೊರಗೆ ಬಂದು ಮತ್ತೊಮ್ಮೆ ಎಲ್ಲವನ್ನೂ ಕಣ್ಣಿಗೆ ಕಟ್ಟಿಕೊಂಡ. ಅವನು ಹಿಂತಿರುಗಬೇಕೆನ್ನುವಷ್ಟರಲ್ಲಿ ಕೆಲಸದಾಳು ಹೊರಗೆ ಬಂದ. ಅವನ ಕೈಯಲ್ಲಿ ಹಳೇಯ ಚರ್ಮದ ಚೀಲವಿತ್ತು.

'ಅಮ್ಮೋರೆ, ಈ ಚೀಲ ಬೇಕೇನು?' ಮೇನಕಾಳನ್ನು ಕೇಳುವಾಗ ಇನ್ಸ್‌ಪೆಕ್ಟರ್‌ನ ದೃಷ್ಟಿಯೂ ಅತ್ತ ಸುಳಿಯಿತು.

'ಆ ಚೀಲ ಯಾರದ್ದು?' ಪ್ರಶ್ನೆ ಅನಗತ್ಯವೆನಿಸಿತು ಮೇನಕಾಗೆ.

'ಇದು ಸಣ್ಣಮ್ಮೋರು ಉಪಯೋಗಿಸ್ತಾ ಇದ್ದಿದ್ದು' ಮೇನಕಾ ಉತ್ತರಿಸುವ ಮೊದಲೆ ಕೆಲಸದಾಳು ರಾಮಸ್ವಾಮಿ ಉತ್ತರಿಸಿದ. ಇನ್ಸ್‌ಪೆಕ್ಟರ್ ರಾಜಧಾನಿಗೆ ಮಿಂಚಿನಂತೆ ಅವನತ್ತ ನಡೆದು ಆ ಚೀಲವನ್ನು ತೆಗೆದುಕೊಂಡ.

ಲಹರಿಯ ಹೆಸರೆತ್ತಿದರೆ ಕಿವಿ ನೇರವಾಗಿಸಿಕೊಂಡು ಬರುತ್ತಾರೆನ್ನುವ ಭಯ ಮೇನಕಾಳಿಗಿದ್ದ ಕಾರಣವೇ ಅವಳು ಪೊಲೀಸರನ್ನು ದೂರವಿಟ್ಟಿದ್ದಳು. ಆದರೆ ಈಗ ಅನಗತ್ಯ ಇನ್ಸ್‌ಪೆಕ್ಟರ್‌ನ ಕೈಯಲ್ಲಿ ಸಿಲುಕುವ ಪ್ರಮೇಯ ಎದುರಾದಾಗ ತತ್ತರಿಸಿದಳು.

'ನೋಡಿ, ಆ ಚೀಲ ಹಳೇದು. ಲಹರಿಗೆ ಸಂಬಂಧಪಟ್ಟದ್ದಲ್ಲ. ಸುಮ್ನೆ ಏನೇನೋ ಸಂದೇಹ ಪಟ್ಕೊಂಡು ನಮ್ಮ ನೆಮ್ಮದೀನ ಹಾಳ್ಮಾಡ್ಬೇಡಿ' ಸ್ವಲ್ಪ ಖಾರವಾಗಿ ಹೇಳಿದಾಗ ಇನ್ಸ್‌ಪೆಕ್ಟರ್ ಚೀಲವನ್ನು ಪರಿಶೀಲಿಸಿ ಕೆಲಸದಾಳುವಿನ ಕೈಯಲ್ಲಿಟ್ಟ.

ಮೇನಕಾ ಅವನಿಂದ ಕಸಿದುಕೊಂಡು ಚೀಲವನ್ನು ದೂರಕ್ಕೆ ಎಸೆದಳು. ಇನ್ಸ್‌ಪೆಕ್ಟರ್‌ಗೆ ಮುಖಭಂಗವಾದಂತಾಯಿತು. ಯಾರಿಗೂ ತಿಳಿಯದಂತೆ ಫಾರ್ಮ್ ಹೌಸ್‌ಗೆ ಬಂದು ವಿಷಯ ಸಂಗ್ರಹಿಸಬೇಕೆಂದುಕೊಂಡವನಿಗೆ ರಹಸ್ಯವನ್ನು ಕಾಪಾಡಲು ಸಾಧ್ಯವಾಗಲಿಲ್ಲ. ಮೇನಕಾ ತಾನು ಫಾರ್ಮ್ ಹೌಸ್‌ಗೆ ಬಂದ ವಿಷಯವನ್ನು ಮನೆಯಲ್ಲಿ ಭುಜಂಗೇಶರಾಯರಿಗೆ ತಿಳಿಸುತ್ತಾಳೆ. ಅವರು ಫೋನಾಯಿಸಿ ವಿಚಾರಿಸುತ್ತಾರೆ. ತನ್ನ ಉತ್ತರದಿಂದ ಸಿಟ್ಟಾಗುತ್ತಾರೆ. ಆಗ ತನ್ನ ತನಿಖೆಗೆ ತಡೆಯಾಗುತ್ತದೆ.

'ನಿಮ್ಮ ಡಿಪಾರ್ಟ್‌ಮೆಂಟ್ ಇನ್ನೂ ಏನು ಮಾಡುತ್ತಿದೆ? ನನ್ನ ಮಗಳು ಲಹರಿ ಕಣ್ಮರೆಯಾಗಿ ಮೂರು ತಿಂಗಳ ಮೇಲಾಯಿತು' ದಬಾಯಿಸದೆ ಇರಲಾರರು.

ಇನ್ಸ್‌ಪೆಕ್ಟರ್ ರಾಜಧಾನಿ ಅಲ್ಲಿಂದ ಮೆಲ್ಲನೆ ಕಾಲ್ಕಿತ್ತ. ಅವನು ಕಾಲುದಾರಿಯನ್ನು ಹಿಡಿದು ನಡೆಯುವಾಗಲೂ ಅವನಿಗೆ ಮೇನಕಾಳ ಮೇಲೆ ಸಂದೇಹ!

ಮಾತು ಮಾತಿಗೂ ಉರಿದು ಬೀಳುವ ಪ್ರವೃತ್ತಿಯ ಹೆಣ್ಣು. ನೇರದಾರಿಯಿಂದ ಫಾರ್ಮ್ ಹೌಸ್‌ಗೆ ಬರದೆ ಕಬ್ಬಿನ ತೋಟದ ದಾರಿಯಿಂದ ಬಂದುದೇಕೆ? ಒಗಟಾಯಿತು ಪ್ರಶ್ನೆ. ಅದನ್ನು ತಿಳಿದುಕೊಳ್ಳುವ ಹಂಬಲ ಪೊಲೀಸ್ ಅಧಿಕಾರಿಗೆ. ನೇರವಾಗಿ ವಿಷಯವನ್ನು ಪ್ರಸ್ತಾಪಿಸಿದರೆ ತಾನು ಕಾಪಾಡಿಕೊಂಡು ಬಂದ ರಹಸ್ಯವೆಲ್ಲಾ ಸರ್ವನಾಶವಾಗುತ್ತದೆ. ಅವನು ಭಾರವಾದ ಹೆಜ್ಜೆಗಳೊಂದಿಗೆ ಬಂದು ಪಿಸಿ ಸಾರಂಗನ ಎದುರು ನಿಂತಾಗ ಅವನ ಮುಖ ಬಿಗಿದುಕೊಂಡಿತ್ತು. ಅಧಿಕಾರಿ ಅವನನ್ನು ನಿರ್ಲಕ್ಷಿಸಿದಂತೆ ನಡೆದಾಗ ಪಿಸಿ ಅವನನ್ನು ಹಿಂಬಾಲಿಸಿಕೊಂಡು ಬಂದ.

'ಪಿಸಿ' ಕರೆದ ಅಧಿಕಾರಿಯ ಬದಲಾದ ದನಿಗೆ ಪಿಸಿಗೆ ಆಶ್ಚರ್ಯವಾಯಿತು.

'ಸಾರ್' ವಿಧೇಯತೆಯಿಂದ ನುಡಿದ.

'ನಿನಗೊಂದು ಜವಾಬ್ದಾರಿಯನ್ನು ವಹಿಸ್ತೀನಿ. ಭುಜಂಗೇಶರಾಯರ ಹಿರಿ ಮಗಳು ಅಂದರೆ ಮೇನಕಾಳ ಚಲನವಲನವನ್ನು ನೀನು ಗಮನಿಸಬೇಕು.